ಶ್ರೀ ಎ. ರಾಮದಾಸ್:- ಹಾಗಾದರೆ, ನಮ್ಮ ಬಿಲ್ಲಿನ ಮತದಾನದ ಹಕ್ಕನ್ನು ಕಳೆದುಕೊಳ್ಳುವುದಾ?

ಅಧ್ಯಕ್ಷರು: ನಾನು ಯಾರನ್ನೂ ಯಾವ ವಿಚಾರದಲ್ಲೂ ನಿರ್ಬಂಧ ಮಾಡುವುದಿಲ್ಲ. ನನಗೆ ಇಲ್ಲದೇ ಇರುವ ಅಧಿಕಾರವನ್ನು ಉಪಯೋಗಿಸಿಕೊಂಡು ನಿಮ್ಮನ್ನು ರಕ್ಷಣೆ ಮಾಡುವುದಕ್ಕಾಗುತ್ತದೆಯೇ? ಬಿಸ್‌ನೆಸ್ ಅಡ್ವೈಸರಿ ಕಮಿಟಿ ಅಡ್ವೈಸ್ ಪ್ರಕಾರ ಬಿಸ್‌ನೆಸ್‌ನ್ನು ಶೆಡ್ಯುಲ್ ಮಾಡಿದ್ದೇನೆ, 26ನೇ ತಾರೀಖು ಅಸೆಂಬ್ಲಿ ಇರುತ್ತದೆ, ಅವತ್ತು ಬರುವವರು ಇರುತ್ತಾರೆ, ಬರದೇ ಇರುವವರು ಇರುತ್ತಾರೆ, ಪರಿಷ್ಷನ್ ಕೇಳುವವರು ಇರುತ್ತಾರೆ, ಅಬ್ಸೆಂಟ್ ಆಗುವವರು ಇರುತ್ತಾರೆ, ಈ ಹಕ್ಕು ತಮಗೇ ಇರುತ್ತದೆ. ಅದೆಲ್ಲಾ ತಮ್ಮ ವಿವೇಚನೆಗೆ ಬಿಟ್ಟಂದ್ದು. ಅವರ ಚುನಾವಣಾ ವೇಳಾ ಪಟ್ಟಿಯನ್ನು ಚೇಂಜ್ ಮಾಡುವುದಕ್ಕೆ ನಾನು ಹೇಳುವುದಕ್ಕಾಗುವುದಿಲ್ಲ. ಆ ತರಹ ಹೊಸ ಸಂಪ್ರದಾಯಗಳನ್ನು ಈ ಅಧ್ಯಕ್ಷ ಪೀಠದಿಂದ ನಾನು ಹಾಕಲಿಕ್ಕೆ ಬರುವುದಿಲ್ಲ. ನಾನು, ನಿಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಲಿಕ್ಕೆ ಅವಕಾಶ ಕೊಟ್ಟಿದ್ದೇನೆ, ಸರ್ಕಾರ ಅದಕ್ಕೆ ಉತ್ತರವನ್ನು ಕೊಟ್ಟಿದೆ. ಏನು ಸರಿತೋಚಿದೆಯೋ ಆ ರೀತಿ ಉತ್ತರವನ್ನು ಸರ್ಕಾರ ಕೊಟ್ಟಿದೆ. ನಿಮ್ಮ ಮತ್ತು ಅವರ ಮಧ್ಯೆ ಇದನ್ನು ಇತ್ಯರ್ಥ ಮಾಡಿಕೊಳ್ಳಬೇಕೇ ಹೊರತು ನಾನು ಮಧ್ಯೆ ಪ್ರವೇಶ ಮಾಡುವುದಕ್ಕೆ ನನ್ನ ಕಾರ್ಯ ವ್ಯಾಪ್ತಿಗೆ ಅದು ಬರತಕ್ಕಂಥಾದ್ದಲ್ಲ. ನನ್ನ ರಕ್ಷಣೆ ಮತ್ತು ನನ್ನ ಒಲವಿನ ಪ್ರಕಾರ ವಿಷಯವನ್ನು ಪ್ರಸ್ತಾಪ ಮಾಡುವುದಕ್ಕೆ ನಾನು ಅವಕಾಶ ಮಾಡಿಕೊಟ್ಟಿದ್ದೇನೆ.

ಶ್ರೀ ಎ. ರಾಮದಾಸ್:- ಚುನಾವಣೆ ದಿನಾಂಕವನ್ನು ಮುಂದೂಡಬೇಕೆಂದು ಸರ್ಕಾರಕ್ಕೆ ಮನವಿ ಮಾಡಿದರೂ ಅದಕ್ಕೆ ಪುರಸ್ಕಾರ ಕೊಡದೆ, ಈ ಮನೆಯ ಸದಸ್ಯರುಗಳಾದ ನಾವು 4 ಜನರ ಆ ಚುನಾವಣೆಯಲ್ಲಿ ಭಾಗವಹಿಸುವುದನ್ನು ತಪ್ಪಿಸಬೇಕೆಂದು ಆ ರೀತಿ ಮಾಡಿದ್ದಾರೆ. ಆದುದರಿಂದ, ನಾವು ಇದನ್ನು ಪ್ರತಿಭಟಿಸಿ ಧರಣೆಯನ್ನು ಮಾಡುತ್ತೇವೆ.

(ಮಾನ್ಯ ಸದಸ್ಯರಾದ ಶ್ರೀ ಎ. ರಾಮದಾಸ್‌ರವರು, ಶ್ರೀ ಮಾರುತಿರಾವ್ ಪವಾರ್‌ರವರು ಮತ್ತು ಶ್ರೀ ಶಂಕರಲಿಂಗೇಗೌಡರು ಬಾವಿಯೊಳಗೆ ಬಂದು ಧರಣೆ ಕುಳಿತರು.)

(ಖು) ಎ.ಪಿ.ಎಂ.ಸಿ. ಅಧ್ಯಕ್ಷರ ಚುನಾವಣೆ.

ಶ್ರೀ ಡಿ. ಆರ್.ಪಾಟೀಲ್ (ಗದಗ):- ಮಾನ್ಯ ಸಭಾಧ್ಯಕ್ಷರೆ, ಎ.ಪಿ.ಎಂ.ಸಿ., ಅಧ್ಯಕ್ಷರ ಚುನಾವಣೆಯನ್ನು ಮಾರ್ಚ್ 31ರೊಳಗೆ ಮಾಡಲಾಗುತ್ತದೆಂದು ಸರ್ಕಾರ ಈ ಸದನಕ್ಕೆ ಭರವಸೆ ಕೊಟ್ಟಿತ್ತು. ಇವತ್ತಿನ ಸಾಯಂಕಾಲದೊಳಗಾಗಿ ಸಂಬಂಧಿಸಿದ ಅಧಿಕಾರಿಗಳಿಗೆ ಸೂಕ್ತ ಆದೇಶ ಕೊಡದೇ ಇದ್ದರೆ ಕಾನೂನಿನ ಪ್ರಕಾರ ಮಾರ್ಚ್ 31 ರಂದು ಚುನಾವಣೆ ನಡೆಸಲಿಕ್ಕಾಗುವುದಿಲ್ಲ. ಇದು ಹೈಕೋರ್ಟ್‌ನ ಆದೇಶವನ್ನು ಉಲ್ಲಂಘಿಸಿದಂತಾಗುತ್ತದೆ. ಹೋದ ಏಪ್ರಿಲ್ 30 ರೊಳಗೆ ಎ.ಪಿ.ಎಂ.ಸಿ. ಚುನಾವಣೆಯನ್ನು ಪೂರ್ತಿ ಮಾಡಬೇಕೆಂದಾಗ, ಬರೀ ಸದಸ್ಯರ ಚುನಾವಣೆಯನ್ನು ಮಾಡಿ ಅಧ್ಯಕ್ಷ ಮತ್ತು ಉಪಾಧ್ಯಕ್ಷರು ಚುನಾವಣೆಯನ್ನು ಮಾಡದೆ ಒಮ್ಮೆ ಹೈಕೋರ್ಟ್‌ನ ಆದೇಶವನ್ನು ಉಲ್ಲಂಘನೆ ಮಾಡುವುದಕ್ಕೆ ದಯವಿಟ್ಟು ಅವಕಾಶ ಕೊಡಬಾರದು. ಈ ಸದನಕ್ಕೆ ಏನು ಭರವಸೆ ಕೊಡಲಾಗಿದೆಯೋ ಆ ಪ್ರಕಾರ 31ನೇ ತಾರೀಖಿನ ಒಳಗೆ ಚುನಾವಣೆ ನಡೆಸಲಿಕ್ಕೆ ಸಂಬಂಧಿಸಿದ ಅಧಿಕಾರಿಗಳಿಗೆ ಇವತ್ತೆ ಆದೇಶ ಕೊಡಬೇಕೆಂದು ಸರ್ಕಾರಕ್ಕೆ ಒತ್ತಾಯ ತರುತ್ತೇನೆ.